## ಭಟ್ಟರ್ ಸ್ಕಾಚ್

- **ಬಿ.ಎಸ್.ನಾಡಗೌಡರ, ಹೇರೂರು**
ಭಟ್ರೇ, ಯತ್ನಾಳ 'ಯುವರತ್ನ' ಆದ್ರೆ, ಯಡಿಯೂರಪ್ಪ?
**- ಅಂಜದ ಗಂಡು!**

- **ಶರಣಪ್ಪ, ಕಲಬುರಗಿ**
ಭಟ್ರೇ, ಹೆಂಡತಿ ಸಂಸಾರದ ಕಣ್ಣು. ಮತ್ತೆ ಗಂಡ?
**- ಮುಚ್ಚಿ ತೆರೆದು ಮಾಡುವ ರೆಪ್ಪೆ !**

- **ವಿ. ಹೇಮಂತ ಕುಮಾರ್, ಬೆಂಗಳೂರು**
ಭಟ್ರೇ, ಮದುವೆ ಆದವರು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಬಹುದಾ?
**- ಆಚರಿಸಬಹುದು, ಹೆಂಡತಿಯ ಅಣತಿಯ ಪ್ರಕಾರ!**

- **ಸುಜಯ ಆರ್ ಕೊಣ್ಣೂರ್, ವಿದ್ಯಾರಣ್ಯಪುರ**
ಭಟ್ರೇ, ನೀವು ಮನೇಲಿ ಇಲಿ, ಬೀದೀಲಿ ಹುಲಿ ಅಂತೆ?
**- ನೀವು ಯಾರ ಮನೆ ಮತ್ತು ಯಾವ ಬೀದಿ ಎಂಬುದನ್ನು ಸ್ಪಷ್ಟಪಡಿಸಬೇಕಿತ್ತು!**

- **ಸತೀಶ ಎಲ್.ವಿ.,(ಇಮೇಲ್ ಮೂಲಕ)**
ಭಟ್ರೇ, ಮಹಿಳೆಯರಿಗೆ ಮಾತು ಮತ್ತು ಮೇಕಪ್ ಇವೆರಡರಲ್ಲಿ ಯಾವುದು ಇಷ್ಟ?
**- ಮಹಿಳೆಯರು ಅಂತ ಗೊತ್ತಾಗೋದೇ ಮೇಕಪ್ ನಿಂದ ಅಂತ ಗೊತ್ತಿದ್ದೂ ಈ ಪ್ರಶ್ನೆಯಾ?!**

- **ಸಂದೇಶ ಆಚಾರ್ಯ, ಪಿರಿಯಾಪಟ್ಟಣ**
ಭಟ್ರೇ, ಹೆಂಡತಿಯಿಂದ ಗುಟ್ಟನ್ನು ಬಚ್ಚಿಡುವುದು ಹೇಗೆ?
**-ಯಾರ ಹೆಂಡತಿ ಎಂಬುದನ್ನು ಸ್ಪಷ್ಟಪಡಿಸಿದ್ದರೆ ಉತ್ತರಿಸಬಹುದಿತ್ತು!**

- **ಕೀರ್ತಿಕುಮಾರ, ಮೈಸೂರು**
ಭಟ್ರೇ, ಕ್ಲಬ್ ಹೌಸಿಗೆ ಒಮ್ಮೆ ಮೊಯಿಲಿಯವರನ್ನು ಕರೆಸಬಾರದೇ?
**- ನಾವು ನಮ್ಮ ಕೇಳುಗರನ್ನು ಗೌರವಿಸುತ್ತೇವೆ ಮತ್ತು ಅವರು ನೆಮ್ಮದಿಯಿಂದಿರಬೇಕೆಂದು ಬಯಸುತ್ತೇವೆ!**

- **ಪ್ರದೀಪ ನಾಯಕ, ಬೆಂಗಳೂರು**
ಭಟ್ರೇ, ಎಲ್ಲರ ಅಭಿರುಚಿಯೂ ಒಂದೇ ಆಗಿದ್ದರೆ ಏನಾಗುತ್ತಿತ್ತು?
**- ಆಗ ಎಲ್ಲರ ತಲೆಯಲ್ಲೂ ಜುಟ್ಟುಗಳೇ ಕಾಣುತ್ತಿದ್ದವು!**

- **ಮಂಜುನಾಥ ಹತ್ತರವಾಟ, ಕೊಳವಿ**
ಭಟ್ರೇ, ಡಾಕ್ಟರ್ ಮುಖ್ಯವೋ, ಔಷಧಿ ಮುಖ್ಯವೋ?
**- ಸದ್ಯ ಡಾಕ್ಟರ್ ಮುಖ್ಯವೋ, ಮೆಡಿಕಲ್ ಅಂಗಡಿಯವನು ಮುಖ್ಯವೋ ಎಂದು ಕೇಳಲಿಲ್ಲವಲ್ಲ?!**

- **ಯಮುನೇಶ ಕಿಟ್ಟಿ, ಭಾರತೀಪುರ**
ಭಟ್ರೇ, ಗೊತ್ತಿದ್ದೂ ತಪ್ಪು ಮಾಡುವುದೇಕೆ ಸರ್?
**- ತಪ್ಪು ಮಾಡುವುದರಲ್ಲೂ ಅಂಥ ಆತ್ಮವಿಶ್ವಾಸ!**

# ಅಭ್ಯರ್ಥಿ ಆಯ್ಕೆ: ಮಳೆ ನಿಂತರೂ ಹನಿ ನಿಲ್ಲುತ್ತಿಲ್ಲ!

**ಒಂದು ಪಕ್ಷಕ್ಕೆ ಚುನಾವಣೆಯಲ್ಲಿ ಸ್ವಲ್ಪ ಸಕಾರಾತ್ಮಕ ಒಲವಿದೆ ಎಂಬುವ ಅಭಿಪ್ರಾಯವಿದ್ದರೆ, ಟಿಕೆಟ್‌ಗಾಗಿ ತುರುಸಿನ ಸ್ಪರ್ಧೆ ಇರುತ್ತದೆ. ಟಿಕೆಟ್ ಹಂಚುವಿಕೆಯಲ್ಲಿ ಎಲ್ಲರನ್ನೂ ಎಲ್ಲಾ ಕಾಲಕ್ಕೂ ಸಂತೈಸಲು ಸಾಧ್ಯವಿಲ್ಲ. ಕೆಲವರಿಗೆ ನಿರಾಶೆ ಸ್ವಾಭಾವಿಕ.**



ಅಭಿಮತ
ರಮಾನಂದ ಶರ್ಮಾ
vveditoped@gmail.com

'ಮಳೆ ನಿಂತರೂ ಹನಿ ನಿಲ್ಲುತ್ತಿಲ್ಲ' ಇದು ಕನ್ನಡದ ಹಳೆಯ ಗಾದೆ ಮಾತು. ಆದರೆ ಕರ್ನಾಟಕದಲ್ಲಿ ಲೋಕಸಭಾ ಚುನಾವಣೆಗೆ ಬಿಜೆಪಿ ಅಭ್ಯರ್ಥಿಗಳ ಆಯ್ಕೆಯಾದ ನಂತರದ ಬೆಳಣಿಗೆಗೆ ಈ ಗಾದೆಯನ್ನು ಹೋಲಿಸಬಹುದು. ಲೋಕಸಸಭೆ ಚುನಾವಣೆಗೆ ರಾಜಕೀಯ ಪಕ್ಷಗಳು ಅಭ್ಯರ್ಥಿಗಳ ಆಯ್ಕೆಯ ಕಸರತ್ತನ್ನು ಬಹುತೇಕ ಮುಗಿಸಿದ್ದು, ರಾಜ್ಯದಲ್ಲಿ ನಡೆಯಲಿರುವ ಮೊದಲ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಸಲು ನಾಳೆ (ಗುರುವಾರ) ಕೊನೆಯ ದಿನ. ಆದ್ದರಿಂದ ಇದೀಗ ಎಲ್ಲ ಪಕ್ಷಗಳು ಚುನಾವಣಾ ಪ್ರಚಾರಕ್ಕೆ ಹೊರಡಲು ಸನ್ನದ್ದವಾಗುತ್ತಿವೆ. ಆದರೆ, ಆಯ್ಕೆಯಲ್ಲಿನ ಗೊಂದಲ, ಮುನಿಸು ಮತ್ತು ಭಿನ್ನಮತ ತಣಿಯದೇ ಮುಂದುವರಿಯುತ್ತಲೇ ಇದೆ ಮತ್ತು ಇದು ಅಂತಿಮ ಫಲಿತಾಂಶದ ಮೇಲೆ ವಕ್ರದೃಷ್ಟಿ ಬೀರುವ ಸಂಭವ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಈ ಬೆಳವಣಿಗೆ ಕಣದಲ್ಲಿರುವ ಎರಡೂ ಪ್ರಮುಖ ರಾಜಕೀಯ ಪಕ್ಷಗಳಲ್ಲಿಯೂ ಅವರಿಸಿದ್ದು, ಯಾರೂ ಇನ್ನೊಬ್ಬರತ್ತ ಬೆರಳು ತೋರಿಸುವ ಹೆಚ್ಚುಗಾರಿಕೆ ಅಥವಾ ಲೇವಡಿ ಮಾಡುವ ಸಾಧ್ಯತೆ ಕಾಣುತ್ತಿಲ್ಲ.

ಚುನಾವಣೆಗೆ ಅಭ್ಯರ್ಥಿಗಳ ಆಯ್ಕೆ ರಾಜಕೀಯ ಪಕ್ಷಗಳಿಗೆ ಅತಿ ಕ್ಲಿಷ್ಟಕರ ಕೆಲಸ ಎಂದು ರಾಮಕೃಷ್ಣ ಹೆಗಡೆಯವರು ಹೇಳುತ್ತಿದ್ದರು. ಇದು ಚುನಾವಣೆಯನ್ನು ಗೆಲ್ಲುವುದಕ್ಕಿಂತ ಹೆಚ್ಚು ಪ್ರಯಾಸದಾಯಕ ಎನ್ನುತ್ತಿದ್ದರು. ಅದರಲ್ಲೂ ಒಂದು ಪಕ್ಷಕ್ಕೆ ಚುನಾವಣೆಯಲ್ಲಿ ಸ್ವಲ್ಪ ಸಕಾರಾತ್ಮಕ ಒಲವಿದೆ ಎಂಬುವ ಅಭಿಪ್ರಾಯವಿದ್ದರೆ, ಟಿಕೆಟ್‌ಗಾಗಿ ತುರುಸಿನ ಸ್ಪರ್ಧೆ ಇರುತ್ತದೆ. ಟಿಕೆಟ್ ಹಂಚುವಿಕೆಯಲ್ಲಿ ಎಲ್ಲರನ್ನೂ ಎಲ್ಲಾ ಕಾಲಕ್ಕೂ ಸಂತೈಸಲು ಸಾಧ್ಯವಿಲ್ಲ. ಕೆಲವರಿಗೆ ನಿರಾಶೆ ಸ್ವಾಭಾವಿಕ. ಹೈಕಮಾಂಡ್ ಅಥವಾ ವರಿಷ್ಠರು ಈ ಪ್ರಕ್ರಿಯೆಯಲ್ಲಿ ತಮ್ಮದೇಯಾದ ಮಾನದಂಡವನ್ನು ಅನುಸರಿಸುತ್ತಿದ್ದು, ಅದರಲ್ಲಿ ತೇರ್ಗಡೆಯಾಗಿ ಹೊರಬರದವರಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಕೈ ತಪ್ಪುತ್ತದೆ. ಬಹುತೇಕ ಈ ಮಾನದಂಡಗಳಂತೆಯೇ ಟಿಕೆಟ್ ನೀಡಲಾಗುತ್ತಿದ್ದರೂ ಅದನ್ನು ದೃಢವಾಗಿ ಅನುಸರಿಸುತ್ತಾರೆ ಎಂದು ಹೇಳಲಾಗುವುದಿಲ್ಲ.

ಎಲ್ಲಾ ಕಾಯಿದೆ-ಕಾನೂನು ಮತ್ತು ನೀತಿ ನಿಯಮಾವಳಿಗಳಿಗೆ ಅಪವಾದವಿರುತ್ತಿದ್ದು, ಅದರಂತೆ ಆಕಾಂಕ್ಷಿಗಳಿಗೆ ಟಿಕೆಟ್ ಹಂಚುವಾಗಲೂ ಈ ಮಾನದಂಡವನ್ನು ನೂರಕ್ಕೆ ನೂರರಷ್ಟು ಪಾಲಿಸುತ್ತಾರೆ ಎನ್ನಲಾಗದು. ಅಲ್ಲಿಯೂ ಕೂಡಾ ಹಲವು ರೀತಿಯ ಒತ್ತಡ, ತಂತ್ರಗಾರಿಕೆ, ಪಟ್ಟುಗಳು, ಎಳೆತ ಇರುತ್ತಿದ್ದು, ಇವುಗಳನ್ನು ಅಳವಡಿಸಿಕೊಂಡು ಒತ್ತಡವನ್ನು ನಿಭಾಯಿಸಿಕೊಂಡು ಟಿಕೆಟ್ ಹಂಚಬೇಕಾಗುತ್ತದೆ. ಅಂತೆಯೇ ಮಾನದಂಡದ ಪ್ರಕಾರ ತಮಗೆ ಟಿಕೆಟ್ ನೀಡಬೇಕಾಗಿತ್ತು ಎಂದು ಧ್ವನಿ ಎತ್ತಲಾಗದು. ಅಂತಿಮವಾಗಿ ಹೈಕಮಾಂಡ್ (ಕಾಂಗ್ರೆಸ್), ವರಿಷ್ಠರು (ಬಿಜೆಪಿ) ಮತ್ತು ಪಾಲಿಟ್ ಬ್ಯೂರೋ (ಕಮ್ಯುನಿಸ್ಟರು) ಅವರ ಮಾತೇ ಫೈನಲ್. ಭಿನ್ನಮತ ಮತ್ತು ನಿರಾಶೆ ಏನೇ ಇರಲಿ ಸಾಮಾನ್ಯವಾಗಿ ಒಮ್ಮೆ ಆಯ್ಕೆಪಟ್ಟಿಯನ್ನು ಬಿಡುಗಡೆ ಮಾಡಿದ ಮೇಲೆ ಅದರಲ್ಲಿ ತಿದ್ದುಪಡಿ, ಬದಲಾವಣೆ ಬಹುತೇಕ ಅಸಾಧ್ಯ .

ಆರಂಭದಲ್ಲಿ ಮುನಿಸು ಮತ್ತು ಭಿನ್ನಮತ ತೀರಾ ಸಾಮಾನ್ಯ. ದಿನಗಳು ಕಳೆದಂತೆ ಎಲ್ಲವೂ ಸರಿ ಹೋಗುತ್ತದೆ ಎನ್ನುವುದು ಪಕ್ಷದ ಹಿರಿಯ ನಾಯಕರ ಅನಿಸಿಕೆ. ಹಾಗೆಯೇ ದೆಹಲಿ ದೊರೆಗಳು ಭಿನ್ನಮತೀಯರೊಡನೆ ಒಮ್ಮೆಮಾತನಾಡಿದರೆ ಬಿಗುವು ಕಡಿಮೆಯಾಗಿ ಎಲ್ಲವೂ ತಣ್ಣಗಾಗುತ್ತದೆ ಎಂಬುದು ಎರಡೂ ಪಕ್ಷಗಳ ಸಾಮಾನ್ಯ ತಿಳುವಳಿಕೆ. ಆದರೆ,ಲಾಗಾಯ್ತುನಿಂದ ಕಾಣುತ್ತಿರುವ ಈ ಎಲ್ಲಾ ನಿರೀಕ್ಷೆಗಳು ತಲೆಕೆಳಗಾಗಿ ಎರಡು ವಾರವಾದರೂ ಭಿನ್ನಮತದ ದೊಡ್ಡ ಹನಿಗಳು ಇನ್ನೂ ಬೀಳುತ್ತಲೇ ಇವೆ.

ಸದಾನಂದ ಗೌಡ, ಸಿ.ಟಿ. ರವಿ, ನಳಿನ್ ಕುಮಾರ್ ಕಟೀಲ್ ಮತ್ತು ಪ್ರತಾಪ ಸಿಂಹ ಅವರು ಪಕ್ಷದ ಅಣತಿಯಂತೆ ಪಾಲಿಗೆ ಬಂದದ್ದು ಪಂಚಾಮೃತವೆಂದು ವರಿಷ್ಠರು ತೋರಿದ ಗೆರೆಯಲ್ಲಿ ಅಚ್ಛೇದಿನ ನಿರೀಕ್ಷಿಸುತ್ತಾ ಇದ್ದಾರೆ ಮತ್ತು ಪಕ್ಷಕ್ಕೆ ತಮ್ಮ ಬದ್ಧತೆಯನ್ನು ಉಳಿಸಿಕೊಂಡಿದ್ದಾರೆ. ಆದರೆ, ಇನ್ನೂ ಕೆಲವರು ಭಿನ್ನಮತದ ಬಾವುಟವನ್ನು ಇನ್ನೂ ಇಳಿಸಿಲ್ಲ ಎಂಬುದು ಪಕ್ಷದ ನಾಯಕರಿಗೆ ದೊಡ್ಡ ತಲೆನೋವಾಗಿದೆ. ಭಾರತೀಯ ಜನತಾ ಪಕ್ಷಕ್ಕೆ ಇಂತಹ ಭಿನ್ನಮತ ಬಹುಶಃ ಮೊದಲ ಅನುಭವ ಮತ್ತು ಅದು ಇದನ್ನು ನಿರೀಕ್ಷಿಸಿರಲಿಲ್ಲವೇನೋ? ಬಂಡಾಯ ಮತ್ತು ಭಿನ್ನಮತ ಕೊನೆಗೊಳ್ಳುವ ಸೂಚನೆಗಳು ಕಾಣುತ್ತಿಲ್ಲ. ವರಿಷ್ಠರ ನಿರ್ಣಯವನ್ನು ಪ್ರಶ್ನಿಸುವ ಧಾರ್ಷ್ಟ್ಯವನ್ನು ತೋರಿಸುತ್ತಿದ್ದಾರೆ. ಈ ಮೂಲಕ ರಾಜ್ಯದ ಮೇಲೆ ವರಿಷ್ಠರ ಹಿಡಿತ ಸಡಿಲವಾದಂತೆ ಕಾಣುತ್ತಿದೆ.

ವಿವಾದಾತ್ಮಕ ಹೇಳಿಕೆಗಳಿಂದ ತಮ್ಮ ಪುನರ್ ಸ್ಪರ್ಧೆಯ ಅವಕಾಶವನ್ನು ಕಳೆದುಕೊಂಡಿದ್ದಾರೆ ಎಂದು ಹೇಳಲಾಗುವ ಉತ್ತರ ಕನ್ನಡ ಜಿಲ್ಲೆಯ ಅನಂತ ಕುಮಾರ ಹೆಗಡೆ ಪಕ್ಷದ ವಿರುದ್ಧ ಮಾತನಾಡದಿದ್ದರೂ, ಘೋಷಿಸಲ್ಪಟ್ಟ ಆಭ್ಯರ್ಥಿ ಕಾಗೇರಿಯವರ ಜೊಡೆತ್ತಿನ ಕರೆಗೆ ಇನ್ನೂ ಹೆಗಲು ಕೊಟ್ಟಂತಿಲ್ಲ. ಕಾಗೇರಿಯವರು ಒಂಟೆತ್ತಾಗಿಯೇ ಎಳೆಯುತ್ತಿದ್ದಾರೆ ಎನ್ನಲಾಗುತ್ತಿದೆ. ಕೆಲವು ಮಾಧ್ಯಮ ವರದಿಗಳ ಪ್ರಕಾರ ಕಾಗೇರಿಯವರಿಗೆ ಇನ್ನೂ ಅವರ ಸಂಪರ್ಕ ಸಾಧ್ಯವಾಗಿಲ್ಲವಂತೆ. ಅನಂತ ಕುಮಾರ್ ಅವರು ತಮ್ಮ ಅಪ್ತರನ್ನು ಪಕ್ಷೇತರರಾಗಿ ನಿಲ್ಲಿಸುವ ಹುನ್ನಾರದಲ್ಲಿದ್ದಾರೆ ಎನ್ನುವ ವದಂತಿಗಳಿವೆ. ಕಟ್ಟಾ ಹಿಂದುತ್ವವಾದಿಗಳು ಮತ್ತು ಸಂಘದ ಬೆಂಬಲ ಅವರಿಗೆ ಇದೆಯೆಂದು ಹೇಳಲಾಗುತ್ತದೆ. ತಮ್ಮ ಹೇಳಿಕೆಗಳಿಂದ ವಿರೋಧಿ ಕಾಂಗ್ರೆಸ್‌ಗೆ ಅಸ್ತ್ರ ಕೊಡುತ್ತಿದ್ದಾರೆ ಎಂದು ಸ್ವತಃ ಪ್ರಧಾನಿಯವರೇ ಅವರಿಗೆ ಟಿಕೆಟ್ ನೀಡಲು ಮನಸ್ಸು ಮಾಡಿರಲಿಲ್ಲವಂತೆ ಮತ್ತು ಒಂದು ಸೀಟು ಹೋದರೂ ಪರವಾಗಿಲ್ಲ ಎಂದು ಹೇಳಿದ್ದಾಗಿ ಕೆಲವು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಸದ್ಯದ ಪರಿಸ್ಥಿತಿಯಲ್ಲಿ ಉತ್ತರ ಕನ್ನಡದಲ್ಲಿ ಭಿನ್ನಮತ ತಣ್ಣಗಾಗುವ ಸೂಚನೆಗಳಿಲ್ಲ. ಅವರ ಮುಂದಿನ ಹೆಜ್ಜೆಯನ್ನು ಜಿಲ್ಲೆಯ ಜನತೆ ಕಾತುರದಿಂದ ನೋಡುತ್ತಿದ್ದಾರೆ. ಕಾಗೇರಿಯವರಿಗೆ ಢವ ಢವ ಆಗುತ್ತಿದೆ ಎಂದು ವಿಶ್ಲೇಷಕರು ಭಾಷ್ಯ ಬರೆಯುತ್ತಿದ್ದಾರೆ.

ಚಿತ್ರದುರ್ಗದಲ್ಲಿ ಸ್ಥಳೀಯ ಮತ್ತು ಹೊರಗಿನ ಆಭ್ಯರ್ಥಿ ವಿಷಯವಾಗಿ ಭಿನ್ನಮತ ತಾರಕಕ್ಕೇರಿದೆ. ಮದಕರಿ ನಾಯಕರ ಕೋಟೆಯಲ್ಲಿ ಸಂಸತ್ತಿಗೆ ಸ್ಪರ್ಧಿಸಲು ಸ್ಥಳೀಯವಾಗಿ ಯಾರೂ ಇಲ್ಲವೇ ಎಂಬುವ ಗಂಭೀರ ಪ್ರಶ್ನೆಯನ್ನು ಎತ್ತಲಾಗಿದೆ. ಕಳೆದ ಬಾರಿ ಹೊರಗಿನವರು ಸ್ಪರ್ಧಿಸಿದ್ದು, ಈ ಬಾರಿ ಅವರಿಗೆ ಬೇಡ ಎಂದು ಬದಲಾಯಿಸಲು ಒತ್ತಾಯಿಸದರೆ, ಇನ್ನೊಬ್ಬ ಹೊರಗಿನವರನ್ನು ಮೈದಾನಕ್ಕೆ ಇಳಿಸಿದ್ದು ಅಲ್ಲಿನ ಬಿಜೆಪಿ ನಾಯಕರನ್ನು ಕೆರಳಿಸಿದೆ. ಅಲ್ಲಿ ಪಕ್ಷೇತರರಾಗಿ ಸ್ಥಳೀಯರೊಬ್ಬರನ್ನು ಇಳಿಸುವ ಸಾಧ್ಯತೆಯಿದೆ. ಅಂತಿಮವಾಗಿ ವರಿಷ್ಠರು ಸ್ಥಳೀಯ ಕೂಗಿಗೆ ಮಣಿಯದಿದ್ದರೆ, ಪಕ್ಷಕ್ಕೆ ದುಬಾರಿಯಾಗುವ ಸೂಚನೆ ಕೇಳಿಬರುತ್ತಿದೆ.

ದಾವಣಗೆರೆ ಕ್ಷೇತ್ರದಲ್ಲಿ ಕುಟುಂಬ ರಾಜಕಾರಣ ಸದ್ದು ಮಾಡುತ್ತಿದ್ದು, ರೇಣುಕಾಚಾರ್ಯರ ನೇತೃತ್ವದಲ್ಲಿ ಜಿಲ್ಲೆಯ ಕೆಲವು ಶಾಸಕರು ಗಾಯಿತ್ರಿ ಸಿದ್ದೇಶ್ವರಗೆ ಟಿಕೆಟ್ ನೀಡಿರುವ ವಿಷಯದಲ್ಲಿ ಸಿಡಿದೆದ್ದಿದ್ದಾರೆ. ಯಡಿಯೂರಪ್ಪನವರು ಸಂಧಾನ ನಡೆಸಿದರೂ ಎಲ್ಲವೂ ಬೂದಿ ಮುಚ್ಚಿದ ಕೆಂಡದಂತೆ ಕಾಣುತ್ತಿದೆ. ಮೇಲ್ನೋಟಕ್ಕೆ ಸಂಧಾನ ಯಶಸ್ವಿಯಾದಂತೆ ತೋರಿದರೂ, ಮುಂದಿನ ದಿನಗಳಲ್ಲಿ ಬೆಳವಣಿಗೆ ಏನಾಗುತ್ತದೆ ಎನ್ನುವುದನ್ನು ದೃಢವಾಗಿ ಹೇಳಲಾಗದು. ರಾಜಕೀಯದಲ್ಲಿ ಹೊರ ಏಟಿಗಿಂತ ಒಳಯೇಟು ತೀವ್ರವಾಗಿರುತ್ತದೆ.

ಸಂದಾನ, ಮಾತುಕತೆ ಯಾವುದಕ್ಕೂ ಬಗ್ಗದ ಈಶ್ವರಪ್ಪನವರು ತಮ್ಮ ನಿಲುವಿಗೆ ದೃಢವಾಗಿ ಅಂಟಿಕೊಂಡಿದ್ದು, ಯಡಿಯೂರಪ್ಪನವರ ವಿರುದ್ಧ ಮತ್ತು ಪರಿವಾರ ರಾಜಕಾರಣದ ವಿರುದ್ಧ ತಮ್ಮ ವಿರೋಧವನ್ನು ಮುಂದುವರೆಸಿದ್ದಾರೆ. ಅವರು ಪಕ್ಷೇತರರಾಗಿ ಸ್ಪರ್ಧಿಸಲು ಸಿದ್ಧತೆ ನಡೆಸಿದ್ದು, ರಾಘವೇಂದ್ರರ ಹೆದ್ದಾರಿ ಓಟಕ್ಕೆ ಅಡೆತಡೆಯಾಗುವ ಲಕ್ಷಣ ಗೋಚರಿಸುತ್ತಿದೆ. ವದಂತಿಗಳ ಪ್ರಕಾರ ವರಿಷ್ಠರು ಅವರು ಏನಾದರೂ ಮಾಡಕೊಳ್ಳಲಿ ಎನ್ನುತ್ತಿದ್ದಾರಂತೆ. ಅಂತೆಯೇ ಯಾವುದೇ ರೀತಿಯ ಹೊಂದಾಣಿಕೆ ಸದ್ಯ ಕಾಣುತ್ತಿಲ್ಲ. ವಿಶ್ಲೇಷಕರ ಪ್ರಕಾರ ಅವರು ತಮ್ಮ ಹಿಂದಿರುವ ಬೆಂಬಲದ ಲೆಕ್ಕಾಚಾರದಲ್ಲಿ ತಮ್ಮ ನಿಲುವಿಗೆ ಅಂಟಿಕೊಂಡಿರಬೇಕು. ತುಮಕೂರಿನಲ್ಲಿ ಮಾಧುಸ್ವಾಮಿ ಮತ್ತು ಸೋಮಣ್ಣನವರ ಬಿರುಕು ಮುಚ್ಚಿರುವ ಬಗೆಗೆ ಕೊನೆಯ ಮಾತು ಕೇಳುತ್ತಿಲ್ಲ. ರಾಜ್ಯ ನಾಯಕರ ಸಂಧಾನಕ್ಕೆ ಭಿನ್ನಮತೀಯರು ಕೇರ್ ಮಾಡಿದಂತೆ ಕಾಣುತ್ತಿಲ್ಲ.

ಎಲ್ಲವೂ ಸುಗಮ ಮತ್ತು ತಮ್ಮ ಹಾದಿ ಬೆಂಗಳೂರು- ಮುಂಬೈ ಇಂಡಸ್ಟ್ರಿಯಲ್ ಕಾರಿಡಾರ್‌ನಂತೆ ಎಂದು ನಿಶ್ಚಿಂತೆಯಲ್ಲಿರುವ ಪ್ರಲ್ಹಾದ ಜೋಶಿಯವರಿಗೆ ಕೆಲವು ಸ್ವಾಮಿಗಳಿಂದ ಸ್ವಲ್ಪ ತೊಡಕಾಗುವಂತೆ ಕಾಣುತ್ತಿದೆ. ಅದು ಅಂತಹ ಗಂಭೀರ ವಿಷಯವಲ್ಲದಿದ್ದರೂ ಕಸಿವಿಸಿಗೆ ಕಾರಣವಾಗಬಹುದೇನೋ? ಸದ್ಯದ ಮಟ್ಟಿಗೆ ಗಾಳಿ ಬೀಸಿ ಹೋಗಿದೆ. ಆದರೆ, ರಾಜಕೀಯದಲ್ಲಿ ದಿಢೀರ್ ಎಂದು ಬೆಳವಣಿಗೆ ಕಾಣುವುದನ್ನು ಹೇಳಲಾಗದು.

ಭಾರತೀಯ ಜನತಾ ಪಕ್ಷದಲ್ಲಿನ ಭಿನ್ನಮತ ಮತ್ತು ಮುನಿಸಿಗೆ ಹೋಲಿಸಿದರೆ, ಕಾಂಗ್ರೆಸ್ ಪಕ್ಷದ ಸ್ಥಿತಿಗತಿ ಅಷ್ಟು ಗಭೀರವಾಗಿಲ್ಲ. ಬಾಗಲಕೋಟೆ ಮತ್ತು ಕೋಲಾರ ಈ ಎರಡು ಕ್ಷೇತ್ರಗಳಲ್ಲಿ ಮಾತ್ರ ಹೈಕಮಾಂಡ್ ತಲೆಯನ್ನು ಸಾಕಷ್ಟು ಬಿಸಿ ಮಾಡಿವೆ. ಕೋಲಾರದಲ್ಲಿ ಕುಟುಂಬ ರಾಜಕಾರಣದ ವಿರುದ್ಧ ಅಸಹನೆ ಸಿಡಿದೆದ್ದಿದ್ದು, ಸದ್ಯ ಇಬ್ಬರ ಜಗಳದಲ್ಲಿ ಮೂರನೇಯವರಿಗೆ ಲಾಭವಾಗಿದೆ. ಸದ್ಯದ ಮಟ್ಟಿಗೆ ಸಂಘರ್ಷವನ್ನು ನಿವಾರಿಸಲಾಗಿದೆ. ಆದರೆ, ಇದು ಚುನಾವಣೆಯಲ್ಲಿ ಪಕ್ಷವನ್ನು ದಡ ಸೇರಿಸುತ್ತಿದೆಯೋ ಎನ್ನುವುದು ಇನ್ನೂ ಅಸ್ಪಷ್ಟವಾಗಿದೆ. ದಶಕಗಳಿಂದ ಅಧಿಕಾರ ಅನುಭವಿಸುತ್ತಿರುವ ಮುನಿಯಪ್ಪನವರ ಕುಟುಂಬದ ವಿರುದ್ಧ ಕೆಲವರು ಸಿಡಿಮಿಡಿಗೊಂಡಿದ್ದಾರೆ ಮತ್ತು ಬೇರೆಯವರಿಗೂ ಅವಕಾಶ ಸಿಗಲಿ ಎನ್ನುತ್ತಿದ್ದಾರೆ.

ಬಾಗಲಕೋಟೆಯಲ್ಲಿಯೂ ಕುಟುಂಬ ರಾಜಕಾರಣದ ಸದ್ದು. ಟಿಕೆಟ್ ನಿರಾಕರಿಸಲ್ಪಟ್ಟ ವೀಣಾ ಕಾಶ್ಯಪನವರು ಪಕ್ಷೇತರರಾಗಿ ಸ್ಪರ್ಧೆಯ ಚಿಂತನೆಯಲ್ಲಿದ್ದಾರಂತೆ. ಸದ್ಯದ ಮಟ್ಟಿಗೆ ಟಿಕೆಟ್ ಬದಲಾವಣೆ ಅಸಂಭವವಾಗಿದ್ದು, ಮುನಿಸಿಕೊಂಡು ಭಿನ್ನಮತದ ಬಾವುಟ ಹಾರಿಸಿದವರು ಬೇರೆ ಪಕ್ಷ ಸೇರಿ ಅಥವಾ ಪಕ್ಷೇತರರಾಗಿ ಸ್ಪರ್ಧಿಸಬೇಕು. ಜಗದೀಶ್ ಶೆಟ್ಟರ್ ಉದಾಹರಣೆ ಮುಂದಿರುವಾಗ ಈ ಹಾದಿಯನ್ನು ಹಿಡಿಯುವವರು ಕಡಿಮೆ ಎನ್ನಬಹುದು. ಪಕ್ಷದೊಳಗೆ ಇದ್ದು ಪಕ್ಷಕ್ಕೆ ಒಳಯೇಟು ನೀಡಿ ವಿಕೃತ ಸಂತೋಷಿಗಳಾಗಬೇಕು. ಈ ಸಾಧ್ಯತೆ ಕಡಿಮೆಯಿದ್ದು, ಇನ್ನೊಮ್ಮೆ ಮಗದೊಮ್ಮೆ ಪ್ರಯತ್ನಿಸಿ ಒಳ್ಳೆಯ ದಿನಗಳಿಗಾಗಿ ಕಾಯುವ ಪ್ರ ಮೇಯವೇ ಹೆಚ್ಚು. ಒಂದು ದುಡುಕಿನ ನಿರ್ಣಯ ರಾಜಕೀಯ ಭವಿಷ್ಯವನ್ನೇ ಬಲಿ ತೆಗದುಕೊಂಡ ಉದಾಹರಣೆಗಳು ಸಾಕಷ್ಟಿರುವಾಗ ಕಾದು ನೋಡುವ ತಂತ್ರಕ್ಕೆ ಶರಣಾಗಬಹುದು. ಈ ಹನಿಗಳು ದೊಡ್ಡದಾಗಿ ಜಲಪಾತವಾಗದಿರಲಿ ಎನ್ನುವುದು ಜನರ ಆಶಯ.

**(ಲೇಖಕರು : ಅರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)**



ಕಳಕಳಿ
ಸಂದೀಪ್ ಶರ್ಮಾ ಮೂಟೇರಿ

# ಹನಿಹನಿ ನೀರಿಗೂ ಹಾಹಾಕಾರ

ಬರದ ಕಾವಿನ ಜೊತೆಗೆ ಬೇಸಿಗೆಯ ಧಗೆಗೆ ಬೆಂಗಳೂರು ಈಗ ಕೆಂಡದಂತೆ ಬೇಯುತ್ತಿದೆ. ಹಲವು ಕೆರೆಗಳಿಂದ ಆವೃತವಾಗಿದ್ದ ಸಮೃದ್ಧ ಬೆಂಗಳೂರು ಇಂಥ ದಯನೀಯ ಸ್ಥಿತಿಗೆ ತಲುಪಿದ ಬಗೆಯನ್ನು ಅವಲೋಕಿಸಬೇಕಿದೆ. ಹಿಂದಿನ ನಾಲ್ಕು ದಶಕಗಳಲ್ಲಿ ಈ ನಗರವು ಸುಮಾರು ಹತ್ತು ಪಟ್ಟು ವಿಸ್ತಾರವಾಗಿ ಇದೀಗ ಎಂಟುನೂರು ಚದರ ಕಿ.ಮೀಗೂ ಹೆಚ್ಚು ಮಿಕ್ಕಿ ಬೆಳೆಯುತ್ತಿದೆ. ಈ ಕಿರು ಅವಧಿಯಲ್ಲಿ ಜನಸಂಖ್ಯೆಯು ಸುಮಾರು ಆರು ಪಟ್ಟು ಹೆಚ್ಚಾಗಿ ಒಂದೂವರೆ ಕೋಟಿಗೆ ತಲುಪುತ್ತಿದೆ. ಆರ್ಥಿಕ ಉದಾರೀಕರಣದ ನಂತರವಂತೂ ಶಿಕ್ಷಣ, ಉದ್ಯಮ, ಮಾಹಿತಿ ತಂತ್ರಜ್ಞಾನದಲ್ಲಾದ ಕ್ರಾಂತಿಯಿಂದಾಗಿ ಆರ್ಥಿಕತೆ ತೀವ್ರವಾಗಿ ಹಿಗ್ಗಿ, ಜನರ ತಲಾದಾಯ ಆರೆಂಟು ಪಟ್ಟು ಹೆಚ್ಚಾಗಿ, ಅತಿವೇಗವಾಗಿ ಬೆಳೆಯುತ್ತಿರುವ ಒಂದು ಜಾಗತಿಕ ನಗರವಾಗಿ ರೂಪಾಂತರವಾಗಿದೆ.

ಹಿಂದಿನ ನಾಲ್ಕು ದಶಕಗಳಲ್ಲಿ ಬೆಂಗಳೂರಿನ ಅಂಗಳದಲ್ಲಾದ ಈ ಆರ್ಥಿಕ ಅಭಿವೃದ್ಧಿ ಸ್ಫೋಟದಲ್ಲಿ, ಈವರೆಗೂ ನಗರವನ್ನು ಪೊರೆಯುತ್ತಿದ್ದ ಹಿತ್ತಲಿನ ನಿಸರ್ಗವೇನಾಯಿತು? ಜಲಮೂಲವಾಗಿದ್ದ ಬಹುತೇಕ ಕೆರೆ, ತೊರೆಗಳು ಕಣ್ಮರೆಯಾದವು. ಅರ್ಕಾವತಿ, ವೃಷಭಾವತಿ, ಕುಮುದ್ವತಿ ನದಿಪಾತ್ರಗಳು ಒಣಗಿ ಕೊಳಚೆ ಮೋರಿಗಳಾದವು. ಆರೆಂಟು ದಶಕಗಳಿಂದ ನೀರು ನೀಡಿ ಸಲಹಿದ್ದ ತಿಪ್ಪಗೊಂಡನಹಳ್ಳಿ ಜಲಾಶಯವಂತೂ ಹೂಳು ತುಂಬಿ, ಜಲಾನಯನ ಪ್ರದೇಶ ಮಾಯವಾಗಿ ಅವಸಾನದಂಚಿಗೆ ತಲುಪಿದೆ. ಮುಕ್ಕಾಲುಭಾಗ ಹಸಿರು ಕವಚದಿಂದ ಕೂಡಿ ತಂಪಾಗಿದ್ದ ನಗರದಲ್ಲಿ ಈಗ ಶೇ 15-20ರಷ್ಟು ಪ್ರದೇಶದಲ್ಲೂ ಹಸಿರು ಉಳಿದಿಲ್ಲ. ಬೇಸಿಗೆಯಲ್ಲಿ ಅಬ್ಬಬ್ಬಾ ಎಂದರೆ 30-32 ಡಿಗ್ರಿ ಸೆಲ್ಸಿಯಸ್ ಇರುತ್ತಿದ್ದ ತಾಪಮಾನ, ನಲವತ್ತು ಡಿಗ್ರಿ ದಾಟುವುದು ಈಗ ಸಾಮಾನ್ಯವಾಗುತ್ತಿದೆ! ಏಕಮುಖ ಆರ್ಥಿಕ ಅಭಿವೃದ್ಧಿಯ ಗರಬಡಿದು ನಿಸರ್ಗದ ಹಸಿರು ರಕ್ಷಾಕವಚ ಕರಗಿ, ಕುಡಿಯುವ ನೀರಿಗೂ ಬರ ಬಂದ ಬೆಂದಕಾಳೂರಿನ ಕಥೆಯಿದು.

ಜೀವಜಲದ ಕೊರತೆ ನಿಭಾಯಿಸಲು ಜಲಮಂಡಳಿ ಸೆಣಸಾಡುತ್ತಿದೆ. ನೀರಿನ ವಿತರಣೆಯಲ್ಲಿ ಕ್ಷಮತೆ, ಟ್ಯಾಂಕರ್ ಉದ್ಯಮದ ನಿಯಂತ್ರಣ, ಮಿತಬಳಕೆಯಂತಹ ಕ್ರಮಗಳಿಗೆ ಅದು ಮುಂದಾಗಿದೆ. ಖಾಲಿ ಕೆರೆಯಂಗಳದಲ್ಲಿ ಕೊಳವೆಬಾವಿ ತೋಡಿ ನೀರನ್ನು ಮೇಲೆತ್ತಿ ಫಿಲ್ಟರ್ ಮಾಡುವುದು, ಕೊಳಚೆ ನೀರಿನ ಸಂಸ್ಕರಣೆ, ವಾತಾವರಣದ ತೇವಾಂಶವನ್ನು ಬಾಷ್ಪೀಕರಿಸಿ ನೀರು ಸಂಗ್ರಹಿಸುವಂತಹ ಹೊಸ ಪ್ರಯೋಗಗಳ ಬಗೆಗೂ ಸರಕಾರ ಈಗ ಚಿಂತಿಸುತ್ತಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ.

ಹನಿ ನೀರಿಗಾಗಿ ಹಾಹಾಕಾರ ಎದ್ದಿರುವಾಗ, ಸಾಧ್ಯವಿರುವ ಜಲಮೂಲಗಳನ್ನೆಲ್ಲ ಈಗ ಹುಡುಕ ಹೊರಟಿರುವ ಸರಕಾರದ ನಡೆ ವಿಪರ್ಯಾಸದ ಸಂಗತಿ. ಅಂತಿಮಕ್ಷಣದ ಈ ಶಸ್ತ್ರಾಭ್ಯಾಸದಿಂದಾದರೂ ನೀರಿನ ಅಭಾವದ ಈ ಯುದ್ಧವನ್ನು ಎದುರಿಸಲು ಜನ ಶಕ್ತರಾದರೆ ಸಾಕು! ಆದರೆ, ಈ ತಾತ್ಕಾಲಿಕ ಸಮಾಧಾನಕ್ಕೂ ಮೀರಿದ ದೀರ್ಘಕಾಲೀನ ಪರಿಹಾರಗಳತ್ತಲೂ ಚಿಂತಿಸಬೇಕಲ್ಲವೇ? ಅದರ ಬಗ್ಗೆ ಸರಕಾರದ ನಡೆ ಏನು? ನಗರಗಳು ಬೆಳೆದಂತೆಲ್ಲ ಸುತ್ತಲಿನ ಊರು-ಕೇರಿ, ಕೆರೆ-ಹೊಳೆ, ಗದ್ದೆ-ತೋಟಗಳನ್ನು ಕಬಳಿಸುತ್ತಿವೆ. ಕೆರೆ, ಹಳ್ಳ, ಗೋಮಾಳಗಳನ್ನು ಸಾಮೂಹಿಕವಾಗಿ ನಿರ್ವಹಿಸುತ್ತಿದ್ದ ಹಳ್ಳಿಗರು ಪಟ್ಟಣಿಗರಾಗುತ್ತಿದ್ದಂತೆ, ನೆಲ, ಜಲ ರಕ್ಷಣೆಯಲ್ಲಿ ತಮ್ಮ ಜವಾಬ್ದಾರಿ ಮರೆಯುತ್ತಿದ್ದಾರೆ. ಹೀಗಾಗಿ, ಕರಾವಳಿ, ಮಲೆನಾಡು, ಒಳನಾಡು ಎಲ್ಲೆಡೆಯೂ, ಪುಟ್ಟ ಪಟ್ಟಣಗಳಲ್ಲೂ ಜಲಮೂಲಗಳೆಲ್ಲ




ಕೊಳಚೆಯಾಗುತ್ತಿವೆ. ಕುಡಿಯುವ ನೀರಿನ ಬರ ಕಾಡುತ್ತಿದೆ. ಅಂತರ್ಜಲ ಮರುಪೂರಣ, ಹೊಳೆ, ಕೆರೆ, ಬಾವಿಗಳಲ್ಲಿ ಶುದ್ಧ ನೀರಿನ ಲಭ್ಯತೆ, ಕಲುಷಿತ ನೀರಿನ ಶುದ್ಧೀಕರಣದಂತಹವೆಲ್ಲವನ್ನೂ ನಿರಂತರವಾಗಿ ಉಚಿತವಾಗಿ ನಿರ್ವಹಿಸಿ ಜನಜೀವನವನ್ನು ಪೊರೆಯುತ್ತಿದ್ದ ನಿಸರ್ಗದತ್ತ ವ್ಯವಸ್ಥೆಯೇ ಧ್ವಂಸವಾಗುತ್ತಿದೆ. ನಾಡಿನ ಬಹುತೇಕ ಬೆಳೆಯುತ್ತಿರುವ ನಗರ, ಪಟ್ಟಣಗಳ ಕಥೆಯೂ ಇದೇ! ಅವುಗಳ ಸವಾಲುಗಳ ತೀವ್ರತೆಯಲ್ಲಿ ವ್ಯತ್ಯಾಸ ಇದ್ದರೂ, ಸಮಸ್ಯೆಗಳು ಬೆಳೆಯುತ್ತಿರುವ ಪರಿ ಮಾತ್ರ ಒಂದೇ. ಆ ಒಂದೊಂದು ಅಗತ್ಯವನ್ನೂ ಕೃತಕವಾಗಿ ಕೈಗೊಳ್ಳಲು ನೂರಾರು ಕೋಟಿ ಹಣ ವ್ಯಯಿಸಬೇಕಾದ ದೈನೇಸಿ ಹಂತಕ್ಕೆ ಈಗ ತಲುಪಿದ್ದೇವೆ. ಜನರ ಕೊಳ್ಳುವ ಶಕ್ತಿ ಹೆಚ್ಚಾಗುವುದಕ್ಕೂ ನೀರನ್ನು ಬಳಸಿ ತ್ಯಾಜ್ಯ ಹೊರಚೆಲ್ಲುವ ಪ್ರಮಾಣದ ಹೆಚ್ಚಳಕ್ಕೂ ನೇರ ಸಂಬಂಧವಿದೆ ಈ ವಿಷಮ ಪರಿಸ್ಥಿತಿಯಿಂದ ಪಾರಾಗಬೇಕೆಂದರೆ, ತೋರಿಕೆಯ ಸ್ಲೋಗನ್ ಹಾಗೂ ಹಣ ಹೂಡುವುದೇ ಮಾನದಂಡವಾಗಿರುವ ದಿಕ್ಕುದೆಸೆಯಿಲ್ಲದ ಈಗಿನ ಯೋಜನೆಗಳು ನಿಲ್ಲಬೇಕು. ನೆಲ, ಜಲ ರಕ್ಷಣೆಯ ಕಾನೂನುಗಳ ಕಟ್ಟುನಿಟ್ಟಿನ ಪಾಲನೆ, ಸೂಕ್ತ ತಂತ್ರಜ್ಞಾನ ಹಾಗೂ ಯಶೋಗಾಥೆಗಳ ಅಳವಡಿಕೆ, ಜನರ ಸಹಭಾಗಿತ್ವ ಕಾಲಬದ್ಧ ಯೋಜನೆಗಳು- ಇವು ಮೂರನ್ನೂ ಒಟ್ಟಾಗಿ ಸಾಧಿಸಲೇಬೇಕು. ನಗರ, ಪಟ್ಟಣಗಳ ನೀರು ಹಾಗೂ ತ್ಯಾಜ್ಯ ನಿರ್ವಹಣೆಯನ್ನು ಪಾರದರ್ಶಕತೆ ಮತ್ತು ಕ್ಷಮತೆಯಿಂದ ನಿರ್ವಹಿಸಬಲ್ಲ ಒಂದು ಸ್ವಾಯತ್ತ ವ್ಯವಸ್ಥೆ ರೂಪುಗೊಂಡರೆ ಮಾತ್ರ ಇದು ಸಾಧ್ಯ.

ಈ ದಿಸೆಯ ಸವಾಲುಗಳಲ್ಲಿ, ಸ್ಥೂಲವಾಗಿ ಮೂರು ಆಯಾಮಗಳನ್ನು ಗುರುತಿಸಬಹುದು. ಮೊದಲನೆಯದಾಗಿ, ಜಲಮೂಲಗಳ ರಕ್ಷಣೆ. ನಗರಗಳಿಗೆ ನೀರು ಪೂರೈಸುವ ನದಿ, ಕೆರೆಗಳು ಹಾಗೂ ಮಳೆನೀರನ್ನು ಸಾಗಿಸುವ ರಾಜಕಾಲುವೆಗಳ ಜಲಾನಯನ ಪ್ರದೇಶದ ಗಡಿ ಗುರುತಿಸಿ, ಅವುಗಳ ಅಂಚಿನಲ್ಲಿ ಇರಬೇಕಾದ 'ಕನಿಷ್ಠ ಬಫರ್ ವಲಯ'ವನ್ನು ಕಾಪಿಡಬೇಕು. ಅಲ್ಲಿ ಸೂಕ್ತ ಗಿಡಮರಗಳ ಹಸಿರುಕವಚ ಬೆಳೆಸಿದರೆ ನೆರೆ ನಿಯಂತ್ರಣ, ಮಳೆನೀರು ಸಂಗ್ರಹ, ಸಿಹಿನೀರಿನ ಸಂಗ್ರಹ ಎಲ್ಲವೂ ಸಾಧ್ಯವಾಗಬಲ್ಲದು. ರಿಯಲ್ ಎಸ್ಟೇಟ್ ಉದ್ಯಮ, ಭೂ ಒತ್ತುವರಿ, ಸೂಕ್ತ ನೆಲಬಳಕೆ ನೀತಿಯೇ ಇರದೆ ಸಾಗಿರುವ ನಗರೀಕರಣದಂತಹವನ್ನೆಲ್ಲ ನಿಯಂತ್ರಿಸಿದರೆ ಮಾತ್ರ ಈ ಜಲಪಾತ್ರಗಳು ಉಳಿದಾವು. ಕೊಳವೆಬಾವಿ ಬಳಕೆಗಂತೂ ನಿಯಂತ್ರಣ ಬೇಕೇಬೇಕು. ನೆರೆ, ಬರ ಎಲ್ಲಕ್ಕೂ 'ಹವಾಮಾನ ಬದಲಾವಣೆ'ಯತ್ತ ಬೊಟ್ಟು ಮಾಡುವ ಉಡಾಫೆ ಕೈಬಿಟ್ಟು, ಈ ಬಗೆಯ ಶಿಸ್ತುಬದ್ಧ ಜಲನಿರ್ವಹಣೆಗೆ ಮುಂದಾಗಬೇಕಿದೆ. ಎರಡನೆಯದಾಗಿ, ಮನೆ, ಉದ್ಯಮ, ವಸತಿ ಸಮುಚ್ಚಯ, ಸಾರ್ವಜನಿಕ ಹಾಗೂ ಕೈಗಾರಿಕಾ ಪ್ರದೇಶದಂತಹ ಎಲ್ಲೆಡೆ ಮಳೆನೀರು ಸಂಗ್ರಹ ಯೋಜನೆಯ ಅನುಷ್ಠಾನವಾಗಬೇಕು. ಇದಕ್ಕೆ ಬೇಕಾದ ಸೂಕ್ತ ತಂತ್ರಜ್ಞಾನ ಹಾಗೂ ಯಶೋಗಾಥೆಗಳು ನಮ್ಮ ನಾಡಿನಲ್ಲೇ ಲಭ್ಯವಿದ್ದರು ಉದಾಸೀನತೆ ತೋರುವುದು ದುರದೃಷ್ಟಕರ. ಈಗ ಬೇಕಾದದ್ದು ಅಳವಡಿಕೆಯ ಬದ್ಧತೆ ಮಾತ್ರ. ನಗರಾಡಳಿತಗಳು ಒದಗಿಸುವ ಕುಡಿಯುವ ನೀರನ್ನು ಮನೆ ಹಾಗೂ ಉದ್ಯಮಗಳಲ್ಲಿ ಮಿತವಾಗಿ ಬಳಸಬೇಕು. ಉಳಿದಂತೆ ಗೃಹಬಳಕೆ, ತೋಟಗಾರಿಕೆ, ಉದ್ಯಮ, ಕೈಗಾರಿಕೆ ವಾಣಿಜ್ಯ ಬಳಕೆಗೆ ಸಂಸ್ಕರಿಸಿದ ನೀರನ್ನು ಮರುಬಳಸುವ ನೀತಿ ಜಾರಿಯಾಗಬೇಕಿದೆ. ಸಮಾಜವು ನೀರಿನ ಬಳಕೆಯ ತನ್ನ ನಡವಳಿಕೆಯಲ್ಲಿ ಈ ಬದಲಾವಣೆ ಮಾಡಿಕೊಳ್ಳಬೇಕಾದದ್ದು ಅತ್ಯಗತ್ಯ. ಅಂತಿಮವಾಗಿ, ಕೊಳಚೆನೀರಿನ ಸಂಸ್ಕರಣೆ ಕುರಿತು ಹೇಳುವುದಾದರೆ, ಮನೆ ಹಾಗೂ ಕೈಗಾರಿಕೆಗಳ ತ್ಯಾಜ್ಯ ನೀರನ್ನು ಪ್ರತ್ಯೇಕವಾಗಿ ಸಾಗಿಸಿ ಸಂಸ್ಕರಿಸಬೇಕು. ಕೊಳಚೆಯ ಸ್ವರೂಪವನ್ನು ಆಧರಿಸಿ, ವಿವಿಧ ಬಗೆಯ ಸುಲಭ ಶುದ್ಧೀಕರಣ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಿದೆ. ಸರಕಾರ ಹಾಗೂ ಖಾಸಗಿ ಕ್ಷೇತ್ರಗಳು ಜವಾಬ್ದಾರಿಯುತವಾಗಿ ವರ್ತಿಸಿದರೆ ಇದು ಸಾಧ್ಯ. ಸಂಸ್ಕರಿಸಿದ ನೀರಿನ ಸುರಕ್ಷತೆಯನ್ನು ಜನರು ತಕ್ಷಣ ಒಪ್ಪಲಿಕ್ಕಿಲ್ಲ, ನದಿ, ಕೆರೆಗಳ ಮೂಲದ ಸ್ವಚ್ಛ ನೀರನ್ನು ಗ್ರಾಹಕರಿಗೆ ಒದಗಿಸುವಾಗಲೂ ಈಗಿನ ನಗರಾಡಳಿತಗಳು ಹಲವೊಮ್ಮೆ ಸೋಲುತ್ತಿರುವಾಗ, ನಾಗರಿಕರು ತೋರಬಹುದಾದ ಅಂಥ ಸಂಶಯ ಸಹಜವೇ. ನ್ಯೂನತೆಗಳನ್ನೆಲ್ಲ ಮೀರಿದ ಕಾರ್ಯಕ್ಷಮತೆ ಹಾಗೂ ಪಾರದರ್ಶಕತೆಯಿರುವ ವಿಶ್ವಾಸಾರ್ಹ 'ಜಲಮೂಲ ರಕ್ಷಣೆ ಹಾಗೂ ವಿತರಣೆ ವ್ಯವಸ್ಥೆ'ಯೊಂದಕ್ಕಾಗಿ ನಗರ ಪ್ರದೇಶಗಳೀಗ ಕಾಯುತ್ತಿವೆ. ನಾಗರೀಕರು ಸಹಕರಿಸಬೇಕಿದೆ.

**(ಲೇಖಕರು: ಹವ್ಯಾಸಿ ಬರಹಗಾರರು)**

# ಬದುಕೆಂಬ ವಸ್ತುವಿಗೆ, ಖುಷಿಯೆಂಬ ದರಪಟ್ಟಿ!

**ಸಾವಧಾನತೆಯನ್ನೇ ನಾವೆಲ್ಲ ಇಂದು ಸಾಧ್ಯವಾಗಿಸಿಕೊಳ್ಳಬೇಕು. ಕೊರಗುವಿಕೆ ಬದುಕನ್ನು ಕಸಿಯುತ್ತದೆ ಚಿಗುರೊಡೆಯಲು ಬಿಡುವುದಿಲ್ಲ. ಕಾರು, ಮನೆ, ಬಂಗ್ಲೆ, ದುಡ್ಡು ಎನ್ನುವ ಎಲ್ಲಾ ಕಾಸ್ಟ್ಲಿ ವಸ್ತುಗಳ ಆಚೆ ಇಣುಕಿ ನೋಡಿದರೆ ಅಸಲಿಗೆ ಹೆಚ್ಚು ದುಬಾರಿಯಾಗಿರುವುದು ಮತ್ತೆ ಮತ್ತೆ ಸಿಗಲಾರದ ನಮ್ಮೆಲ್ಲರ ಬದುಕು. ಅದರ ಪ್ರೈಸ್ ಟ್ಯಾಗೇ ಹ್ಯಾಪಿನೆಸ್.**



ಶ್ವೇತಪತ್ರ
ಡಾ.ಶ್ವೇತಾ.ಬಿ.ಸಿ
shwethabc@gmail.com

ನಗುವಿಲ್ಲದೇ ಒಂದು ದಿನ ಕಳೆದರೂ ಆ ದಿನವು ಬದುಕಲ್ಲಿ ವ್ಯರ್ಥವಾಯಿತು ಎಂದೇ ಅರ್ಥ ಅಲ್ಲವೇ? ದಸ್ತೋವೆಸ್ಕಿ ಹೇಳಿದ ಒಂದು ಮಾತು 'ಮನುಷ್ಯನ ಇರುವಿಕೆಯ ಸೀಕ್ರೆಟ್ ಕೇವಲ ಬದುಕುವುದಷ್ಟೇ ಅಲ್ಲ, ಆದರೆ ಬದುಕುವುದರೊಟ್ಟಿಗೆ ಕೆಲವು ಸಂಗತಿಗಳನ್ನು ಜೊತೆಗೂಡಿಸುತ್ತಾ ಹೋಗುವುದು'.

ನಿಜವೇ ಅಲ್ವಾ! ಬದುಕು ಅಂದರೆ ಏನು? ಹೇಗೆ? ಯಾವುದರ ಬಗ್ಗೆ? ನಮ್ಮ ಬದುಕನ್ನು ಅರ್ಥಪೂರ್ಣವಾಗಿಸಿಕೊಳ್ಳುವುದು ಹೇಗೆ? ನಮ್ಮಲ್ಲಿ ಎಷ್ಟು ಜನ ಮೇಲಿನ ಪ್ರಶ್ನೆಗಳನ್ನು ನಮಗೆ ನಾವೇ ಕೇಳಿಕೊಳ್ಳುತ್ತೇವೆ? ಪ್ರಶ್ನೆಗಳನ್ನು ಕೇಳಿಕೊಳ್ಳುತ್ತಾ ನಮಗೆ ನಾವೇ ರಿಫ್ಲೆಕ್ಟ್ ಮಾಡಿಕೊಳ್ಳಬೇಕು. ಹೀಗೆ ರಿಫ್ಲೆಕ್ಟ್ ಮಾಡಿಕೊಳ್ಳಲು ಮನಸ್ಸಿನಾಳಕ್ಕೆ ಇಳಿದು ನಮಗೇನು ಮುಖ್ಯ ಎಂದು ಕೇಳಿಕೊಳ್ಳಬೇಕು? ನಮ್ಮ ಬದುಕು ಹೇಗಿರಬೇಕು ಈ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. ನಾವು ಯಾವ ತರಹದ ವ್ಯಕ್ತಿಯಾಗ ಬಯಸುತ್ತೇವೆ ಇದನ್ನು ನಮಗೆ ನಾವೇ ಪ್ರಶ್ನಿಸಿಕೊಳ್ಳಬೇಕು? ಎಂತಹ ಸಂಬಂಧಗಳನ್ನು ನಾವು ಬೆಳೆಸಿಕೊಳ್ಳಲು ಇಚ್ಛಿಸುತ್ತೇವೆ ಎನ್ನುವುದನ್ನು ಸ್ಪಷ್ಟಪಡಿಸಿಕೊಳ್ಳಬೇಕು. ನಮ್ಮ ಸಮಯ ಮತ್ತು ಶಕ್ತಿಯನ್ನು ಹೇಗೆ ವ್ಯಯಿಸಲು ಇಷ್ಟಪಡುತ್ತೀವಿ? ಹೀಗೆಪ್ರಶ್ನೆಗಳನ್ನು ಮಾಡಿಕೊಳ್ಳುತ್ತಾ ಹೋಗಬೇಕು ಉತ್ತರಗಳು ನಮ್ಮ ಬಾಯಿಯ ತುದಿಯಲ್ಲಿ ಇವೆಯೋ ಇಲ್ಲವೋ ಎನ್ನುವುದು ಬೇರೆ ಮಾತು. ಆದರೆ ಪ್ರಶ್ನೆಗಳನ್ನು ಕೇಳಿಕೊಳ್ಳುವುದನ್ನು ನಿಲ್ಲಿಸಬಾರದು.

ಏಕೆಂದರೆ ಮೇಲಿನ ಎಲ್ಲಾ ಪ್ರಶ್ನೆಗಳು ನಮ್ಮನ್ನು ಗೈಡ್ ಮಾಡುತ್ತಾ, ಪ್ರೇರೇಪಿಸುತ್ತಾ ನಮ್ಮ ಬದುಕಿಗೆ ಮೌಲ್ಯ ತುಂಬುತ್ತ ನಮ್ಮ ಸುತ್ತಲಿನ ಪ್ರಪಂಚಕ್ಕೆ ಹೊಂದುಕೊಂಡು ಬದುಕುವುದನ್ನು ಸಾಧ್ಯವಾಗಿಸುತ್ತವೆ. ಇಲ್ಲಿ ನನ್ನ ಗೆಳೆಯನೊಬ್ಬನ ಸ್ಫೂರ್ತಿದಾಯಕ ಕಥೆಯನ್ನು ನಿಮ್ಮೊಂದಿಗೆ ಹಂಚಿಕೊಳ್ಳಲೇಬೇಕು. ಈ ಹುಡುಗನಿಗೆ ಬ್ಯುಸಿನೆಸ್ ಎಂದರೆ ಹುಚ್ಚು, ಈ ಹುಚ್ಚಿಗೆ ಬಿದ್ದು ಸ್ವಂತ ಮನೆಯನ್ನೂ ಸೇರಿದಂತೆ ಎಲ್ಲವನ್ನು ಕಳೆದುಕೊಳ್ಳಬೇಕಾಯಿತು. ಹೇಗಾದರೂ ಮತ್ತೆ ಬದುಕನ್ನು ಕಟ್ಟಲೇಬೇಕು. ಗೆಳೆಯ ಮತ್ತು ಆತನ ಹೆಂಡತಿ ಇಬ್ಬರೂ ಮತ್ತೊಂದು ಊರಿಗೆ ರಿಲೋಕೇಟ್ ಆದರೂ, ಅಲ್ಲಿ ಆತನಿಗೆ ಬೋರ್ಡಿಂಗ್ ಶಾಲೆಯಲ್ಲಿ ಕೆಲಸ ಸಿಕ್ಕಿತು. ಅದುವರೆಗೂ ಆತ ಮಾಡುತ್ತಿದ್ದ ಬಿಸಿನೆಸ್ಸಿಗೂ ಇವತ್ತಿನ ಕೆಲಸಕ್ಕೂ ಅಸಲಿಗೆ ಸಂಬಂಧವೇ ಇಲ್ಲ, ಬೋರ್ಡಿಂಗ್ ಸ್ಕೂಲ್‌ನಲ್ಲಿ ಮಕ್ಕಳು ಹೋಂವರ್ಕ್ ಮಾಡಿದ್ದಾರೆ ಇಲ್ಲವಾ? ಅವರ ಬೇಕು ಬೇಡಗಳೇನು? ಅವರು ಸರಿಯಾದ ಸಮಯಕ್ಕೆ ಮಲಗುತ್ತಾರಾ? ಏಳುತ್ತಾರಾ ಹೀಗೆ



ಎಲ್ಲವನ್ನೂ ನಿಭಾಯಿಸುವ ಹಾಸ್ಟೆಲ್ ವಾರ್ಡನ್ ಜವಾಬ್ದಾರಿ ಈತನದ್ದು. ಬೆಂಗಳೂರಿಗೆ ಬಂದಾಗ ಒಮ್ಮೆ ಸಿಕ್ಕಿದ್ದ ಆಗ ಆತ ಹಂಚಿಕೊಂಡದ್ದು, 'ಶ್ವೇತಾ ನನ್ನೆದುರಿಗೆ ಉಳಿದಿದ್ದು ಎರಡೇ ಆಯ್ಕೆ ಒಂದು ಮನೆ ಮಠ ಆಸ್ತಿ-ಪಾಸ್ತಿ ಎಲ್ಲವನ್ನೂ ಕಳೆದುಕೊಂಡೆನೆಂಬ ದುಃಖದ ಮೂಟೆಯನ್ನು ಬೆನ್ನಿಗೇರಿಸಿಕೊಂಡು ಡಿಪ್ರೆಶನ್‌ನಿಗೆ ಒಳಗಾಗಿ ಬದುಕನ್ನು ಯಾತನಮಯವಾಗಿಸಿಕೊಳ್ಳುವುದು. ಇಲ್ಲವೇ ಬದುಕಲ್ಲಿ ಬಂದಿದ್ದನ್ನು ಒಪ್ಪಿಕೊಂಡು ನಾನು ಕಳೆದುಕೊಂಡದ್ದು ಆಸ್ತಿ ಮನೆ ತಾನೆ ಮತ್ತೆ ಸಂಪಾದಿಸಬಹುದೆಂಬ ಧೈರ್ಯ ತುಂಬಿಕೊಂಡು ಬದುಕಿಗೆ ಭರವಸೆ ಮೂಡಿಸಿಕೊಳ್ಳುತ್ತ ಮತ್ತೆ ಹೊಸ ಬದುಕನ್ನು ಕಟ್ಟಬೇಕೆಂದುಕೊಂಡಿದ್ದು'. ನನ್ನದು ಎರಡನೇಯ ಆಯ್ಕೆಯಾಗಿತ್ತು. ಈಗ ಬೋರ್ಡಿಂಗ್ ಸ್ಕೂಲ್‌ನಲ್ಲಿ ಗುರುತರ ಜವಾಬ್ದಾರಿ ನನ್ನದಾಗಿದೆ ಮಕ್ಕಳೊಟ್ಟಿಗೆ ಬೆರೆಯುತ್ತಾ ಅವರಿಗೆ ಕೌನ್ಸಲಿಂಗ್ ಮಾಡುತ್ತಾ ಬದುಕಿನ ಪಾಠಗಳನ್ನು ಹೇಳಿಕೊಡುತ್ತಾ ನನ್ನ ಎಲ್ಲಾ ಸಮಸ್ಯೆಗಳ ಮಧ್ಯೆಯೂ ಕಷ್ಟಗಳ ಮಧ್ಯೆಯೂ ಖುಷಿಯನ್ನು ನೆಮ್ಮದಿಯನ್ನು ಕಂಡುಕೊಂಡಿದ್ದೇನೆ ಕಳೆದು ಹೋಗಿದ್ದ ಅರ್ಥ ಮತ್ತು ಪೂರ್ಣತೆಗಳು ಮತ್ತೆ ಬದುಕನ್ನು ತುಂಬುತ್ತಿವೆ ನಾನು ನನ್ನ ಹೆಂಡತಿ ಖುಷಿಯಾಗಿದ್ದೇವೆ.

ಈ ಸಾವಧಾನತೆಯನ್ನೇ ನಾವೆಲ್ಲ ಇಂದು ಸಾಧ್ಯವಾಗಿಸಿಕೊಳ್ಳಬೇಕು. ಕೊರಗುವಿಕೆ ಬದುಕನ್ನು ಕಸಿಯುತ್ತದೆ ಚಿಗುರೊಡೆಯಲು ಬಿಡುವುದಿಲ್ಲ, ಕಾರು, ಮನೆ, ಬಂಗ್ಲೆ, ದುಡ್ಡು ಎನ್ನುವ ಎಲ್ಲಾ ಕಾಸ್ಟ್ಲಿ ವಸ್ತುಗಳ ಆಚೆ ಇಣುಕಿ ನೋಡಿದರೆ ಅಸಲಿಗೆ ಹೆಚ್ಚು ದುಬಾರಿಯಾಗಿರುವುದು ಮತ್ತೆ ಮತ್ತೆ ಸಿಗಲಾರದ ನಮ್ಮೆಲ್ಲರ ಬದುಕು. ಅದರ ಪ್ರೈಸ್ ಟ್ಯಾಗೇ ಹ್ಯಾಪಿನೆಸ್. ಬದುಕಲ್ಲಿ ಕೆಲವೊಮ್ಮೆ ಬೆಳೆಯುವುದಕ್ಕೆ ಸೋಲು ಮತ್ತು ಅದರ ಅನುಭವಗಳು ಬೇಕಾಗಿರುತ್ತವೆ. ಈ ಬೆಳವಣಿಗೆಯೇ ನಮ್ಮಲ್ಲಿ ಖುಷಿಯನ್ನು ತುಂಬುವ ವ್ಯಾಖ್ಯಾನಗಳಾಗಿದೆ. ಸೋಲು ನಮ್ಮನ್ನು ತರಚಿ ಗಾಯ ಆಯಿತೆಂದು ನೊಂದುಕೊಂಡು ಕೂರುವುದಲ್ಲ ಗಾಯ ಮಾಗಿಸಿ ಮತ್ತೆ ಪುಟಿದೇಳುವುದು.

ಮುಗಿಸುವ ಮುನ್ನ ; ಒಂದು ಹ್ಯಾಪಿನೆಸ್‌ನ ಸೀಕ್ರೆಟ್ ಕಥೆ

ಒಮ್ಮೆ ವ್ಯಾಪಾರಿಯೊಬ್ಬ ತನ್ನ ಮಗ ಸಂತೋಷದ ಸೀಕ್ರೆಟ್ ಅನ್ನು ಅರಿಯಲಿ ಎಂಬ ಉದ್ದೇಶದಿಂದ ಮಗನನ್ನು ಸಂತೋಷದ ಗುಟ್ಟನ್ನು ಕಲಿತು ಬಾ ಎಂದು ಕಳುಹಿಸಿಕೊಡುತ್ತಾನೆ. ಹುಡುಗ ಸಂತೋಷದ ಸೀಕ್ರೆಟ್ ಅರಸುತ್ತ ಎಲ್ಲಾ ಕಡೆ ಸುತ್ತಾಡುತ್ತಾನೆ. ಕೊನೆಗೆ ಆತನಿಗೆ ಬೆಟ್ಟದ ತುದಿಯಲ್ಲಿ ಕೋಟೆಯೊಂದು ಕಾಣುತ್ತದೆ. ಅಲ್ಲಿಗೆ ಹೋದರೆ ಅಲ್ಲಿರುವ ಬುದ್ಧಿವಂತ ವ್ಯಕ್ತಿಯಿಂದ ಹ್ಯಾಪಿನೆಸ್‌ನ ಸೀಕ್ರೆಟ್ ತಿಳಿಯಬಹುದೆಂದು, ಯಾರೋ ಹೇಳಿದ ಮಾತು ನೆನಪಾಗಿ ಆತ ಬೆಟ್ಟದ ತುದಿ ತಲುಪುತ್ತಾನೆ. ಏನಾಶ್ಚರ್ಯ ಕೋಟೆಯಷ್ಟೇ ಎಂದುಕೊಂಡಿದ್ದ ಹುಡುಗನಿಗೆ ಅಲ್ಲೊಂದು ಪುಟ್ಟ ಪ್ರಪಂಚವೇ ಕಣ್ಣೆದುರಿಗೆ ತೆರೆದುಕೊಳ್ಳುತ್ತದೆ. ವ್ಯಾಪಾರಿಗಳ ಓಡಾಟ, ಪ್ರಪಂಚದ ಅತ್ಯುತ್ತಮ ಖಾದ್ಯಗಳ ಸವಿಯೂಟ, ಹಿಮ್ಮೇಳದಲ್ಲಿ ಹಾಡೊಂದು ಧ್ವನಿಸುತ್ತಿರುತ್ತದೆ, ಅಲ್ಲಲ್ಲಿ ಜನರ ಚಿಕ್ಕ-ಚಿಕ್ಕ ಗುಂಪುಗಳು ನೋಡಲು ಕಾಣಸಿಗುತ್ತದೆ. ಬಹಳ ಹೊತ್ತು ಕಾದ ಬಳಿಕ ಹುಡುಗನಿಗೆ ಬುದ್ಧಿವಂತ ವ್ಯಕ್ತಿಯ ಭೇಟಿ ಮಾಡುವ ಅವಕಾಶ ದೊರೆಯುತ್ತದೆ. ಹುಡುಗ ವಿನಮ್ರವಾಗಿ ತಾನು ಬಂದಿರುವ ಉದ್ದೇಶವನ್ನು ಬುದ್ಧಿವಂತ ವ್ಯಕ್ತಿಗೆ ತಿಳಿಸುತ್ತಾನೆ. ಎಲ್ಲವನ್ನೂ ಕೇಳಿಸಿಕೊಂಡ ಬುದ್ಧಿವಂತ ವ್ಯಕ್ತಿ ಸಂತೋಷವನ್ನು ತಿಳಿಸಿಕೊಡುವಷ್ಟು ಸಮಯ ತನ್ನಲ್ಲಿಲ್ಲ. ಆದರೆ ಒಂದು ಕೆಲಸ ಮಾಡಬಹುದು ನೀನು ಎರಡು ಗಂಟೆಗಳಲ್ಲಿ ನನ್ನ ಇಡೀ ಕೋಟೆಯನ್ನು ತಿರುಗಾಡಿ, ಅದರ ಸವಿಯನ್ನು ಅನನ್ಯತೆಯನ್ನು ನೋಡಿ ಬಾ. ಹಾಗೆ ಕೋಟೆ ತಿರುಗುವಾಗ ಈ ಚಮಚವನ್ನು ಹಿಡಿದುಕೊಂಡು ಹೋಗು ಇದರಲ್ಲಿ ಎರಡು ಹನಿ ಎಣ್ಣೆಯಿದೆ. ಹಿಂತಿರುಗಿ ಬರುವಾಗ ಚಮಚದಲ್ಲಿನ ಎಣ್ಣೆ ಬೀಳದಂತೆ ನೋಡಿಕೊಳ್ಳಬೇಕು ಎಂಬ ಷರತ್ತಿನೊಂದಿಗೆ ಕೋಟೆ ನೋಡಲು ಕಳುಹಿಸಿಕೊಡುತ್ತಾನೆ. ಎರಡು ಗಂಟೆಯ ನಂತರ ಹುಡುಗ ಬುದ್ಧಿವಂತ ವ್ಯಕ್ತಿಯ ಬಳಿ ಹುಷಾರಾಗಿ ಚಮಚವನ್ನು ಕೈಯಲ್ಲಿಡಿದು ಬರುತ್ತಾನೆ. ಬುದ್ಧಿವಂತ ವ್ಯಕ್ತಿ ಹುಡುಗನಿಗೆ ನನ್ನ ಕೋಟೆಯಲ್ಲಿನ ಸುಂದರವಾದ ತೋಟ ನೋಡಿದೆಯಾ, ಲೈಬ್ರರಿಯಲ್ಲಿದ್ದ ಅದ್ಭುತವಾದ ಪುಸ್ತಕಗಳ ಸಂಗ್ರಹ ನೋಡಿದೆಯಾ? ಪರ್ಷಿಯಾ ದೇಶದ ಎಂಬ್ರಾಯಿಡರಿ ಯುಳ್ಳ ತೂಗುದೀಪ ನೋಡಿದೆಯಾ ಎಂದು ಕೇಳುತ್ತಾನೆ? ಹುಡುಗ ಮುಜುಗರಪಡುತ್ತಾ ತಾನು ಏನನ್ನು ನೋಡಲು ಸಾಧ್ಯವಾಗಲಿಲ್ಲ. ಏಕೆಂದರೆ ಎಣ್ಣೆ ಚೆಲ್ಲದಂತೆ ನೋಡಿಕೊಳ್ಳಬೇಕೆಂಬ ಷರತ್ತು ಪದೇಪದೇ ನೆನಪಾಗಿ ಗಮನವೆಲ್ಲ ಕೇವಲ ಚಮಚ ಮತ್ತು ಎಣ್ಣೆಯ ಮೇಲಷ್ಟೆ ಇತ್ತು ಎಂದು ಹೇಳುತ್ತಾನೆ. ಆಗ ಬುದ್ಧಿವಂತ ವ್ಯಕ್ತಿ ಮತ್ತೆ ಎರಡು ಹನಿಗಳ ಎಣ್ಣೆಯ ಚಮಚ ಹಿಡಿದು ನನ್ನ ಅದ್ಭುತ ಕೋಟೆ ಹಾಗೂ ಅದರ ಸೌಂದರ್ಯವನ್ನು ಮತ್ತೊಮ್ಮೆ ಸವಿದು ಬಾ ಎಂದು ತಿಳಿಸುತ್ತಾನೆ. ಹುಡುಗ ಈ ಬಾರಿ ಕೋಟೆಯ ಸುಂದರ ಹೂವಿನ ತೋಟ, ಬೆಟ್ಟ-ಗುಡ್ಡಗಳು, ಪ್ರಪಂಚದ ವಿವಿಧ ಖಾದ್ಯಗಳ ಸವಿ ಹೀಗೆ ಎಲ್ಲವನ್ನೂ ಸವಿದು ಬುದ್ಧಿವಂತ ವ್ಯಕ್ತಿಯ ಬಳಿ ಹಿಂದಿರುಗುತ್ತಾನೆ. ನೋಡಿದರೆ ಚಮಚದಲ್ಲಿದ್ದ ಎಣ್ಣೆಯ ಹನಿಗಳು ಸೋರಿ ಹೋಗಿವೆ ಆಗ ಬುದ್ಧಿವಂತ ವ್ಯಕ್ತಿ ಹುಡುಗನನ್ನು ಉದ್ದೇಶಿಸಿ ಹೇಳುತ್ತಾನೆ ಇದೇ ಸಂತೋಷದ ಸೀಕ್ರೆಟ್. ಎಣ್ಣೆ ಚೆಲ್ಲದಂತೆ ಬದುಕಿನ ಎಲ್ಲ ಅದ್ಭುತಗಳನ್ನು ನಮ್ಮದಾಗಿಸಿಕೊಳ್ಳಬೇಕು. ಬದುಕಿನ ರೇಸ್‌ನಲ್ಲಿ ಜವಾಬ್ದಾರಿಗಳನ್ನು ಹೆಗಲಿಗೇರಿಸಿಕೊಂಡು ಖುಷಿ ಸಂತೃಪ್ತಿಗಳನ್ನು ನಮ್ಮದಾಗಿಸಿಕೊಳ್ಳಲು ಬ್ಯಾಲೆನ್ಸ್ ಅತ್ಯಗತ್ಯ ಯಾವುದು ಹೆಚ್ಚಾದರೂ ಕಡಿಮೆಯಾದರೂ ಬ್ಯಾಲೆನ್ಸ್ ತಪ್ಪುತ್ತದೆ ಎಚ್ಚರವಿರಲಿ!

ತಿಳಿಯಿತೇ ಹ್ಯಾಪಿನೆಸ್‌ನ ಸೀಕ್ರೆಟ್!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:100